ಕೃಷಿ ವಿವಿ ಬೆಳೆದ ಜೋಳ ಬರಗು ರಾಷ್ಟ್ರಕ್ಕೆ ಸಮರ್ಪಣೆ

27-08-2024
S-karnataka Pg 10

ಧಾರವಾಡ: ಕೃಷಿ ವಿಶ್ವವಿದ್ಯಾಲಯದ ವಿಜ್ಞಾನಿಗಳು ಅಭಿವೃದ್ಧಿಪಡಿಸಿದ ಮುಂಗಾರು ಜೋಳದ ತಳಿ ಮತ್ತು ಬರಗು ತಳಿಗಳನ್ನು ಪ್ರಧಾನಿ ನರೇಂದ್ರ ಮೋದಿ ಅವರು ಲೋಕಾರ್ಪಣೆ ಮಾಡಿದರು.

ದೇಶದ ವಿವಿಧೆಡೆ ಬೆಳೆದ 109 ನೂತನ ತಳಿಗಳನ್ನು ಮೋದಿ ಅವರು ಬಿಡುಗಡೆಗೊಳಿಸಿದರು. 34 ಧಾನ್ಯದ ಬೆಳೆಗಳು ಮತ್ತು 27 ತೋಟಗಾರಿಕೆ ಬೆಳೆಗಳಾಗಿದ್ದವು. ಅವುಗಳಲ್ಲಿ ಕೃಷಿ ವಿವಿಯಲ್ಲಿ ಅಭಿವೃದ್ಧಿಪಡಿಸಿದ ನಂತರ ಕೇಂದ್ರದಲ್ಲಿ ಮತ್ತು ರಾಷ್ಟ್ರ ಮಟ್ಟದಲ್ಲಿ 5 ವರ್ಷಗಳ ನಿರಂತರ ಪ್ರಯೋಗಗಳ ಫಲಿತಾಂಶವನ್ನು ಪರಿಶೀಲಿಸಿ ವಿಶ್ಲೇಷಿಸಿ ವಿವಿಧ ಸಭೆಯಲ್ಲಿ ಚರ್ಚಿಸಿ ಕೇಂದ್ರದ ಸಿವಿಆರ್‌ಸಿ ಸಮಿತಿಗೆ ಕೃಷಿ ವಿವಿಯ ಜೋಳದ ಮತ್ತು ಬರಗಿನ ತಳಿಗಳನ್ನು ಸಲ್ಲಿಸಲಾಗಿತ್ತು.

ಮೋದಿ ಅವರು ಮುಂಗಾರು ಜೋಳದ ತಳಿ ಡಿಎಸ್‌ಎಚ್–6 ಮತ್ತು ಬರಗು ಡಿಎಚ್‌ಪಿಎಂ–60–4 ಅನ್ನು ಬಿಡುಗಡೆಗೊಳಿಸಿದರು.

ಜೋಳದ ತಳಿಯನ್ನು ರಾಷ್ಟ್ರಮಟ್ಟದಲ್ಲಿ ಐದು ರಾಜ್ಯಗಳ (ಕರ್ನಾಟಕ, ತಮಿಳನಾಡು, ರಾಜಸ್ಥಾನ, ತೆಲಂಗಾಣ ಹಾಗೂ ಗುಜರಾತ್) ಮುಂಗಾರು ಜೋಳ ಬೆಳೆಯುವ ಪ್ರದೇಶಕ್ಕೆ ಶಿಫಾರಸು ಮಾಡಲಾಗಿದೆ. ಬರಗು ತಳಿಯನ್ನು ಕರ್ನಾಟಕ ಹಾಗೂ ತಮಿಳನಾಡಿನ ಮಳೆಯಾಶ್ರಿತ ಪ್ರದೇಶಕ್ಕೆ ಬಿಡುಗಡೆ ಮಾಡಲಾಗಿದೆ.

Horti-tourism: Govt prepares pilot programme, 2 farms identified

SHRADHA TRIVENI
BENGALURU, DHNS



The horticulture department is eyeing a late 2024 launch for one-day trips from Bengaluru to the horti-tourism farms.
PHOTO FOR REPRESENTATION

Tapping on the potential of Karnataka's heritage in gardening and plantation, the government has identified two locations in Bengaluru and Tumakuru district to be developed as part of its Horti-tourism initiative.

Two farms – one on 37 acres at Thippagondanahalli on the outskirts of Bengaluru and another on 250 acres at Doddasaggere in Tumakuru district – will be developed by the departments of horticulture and tourism. The project looks to build on the popularity of experiential eco- and agro-tourism.

K M Parashivamurthy, executive director of National Horticulture Mission, said infrastructure will be developed along with tourism department in these farms.

"The idea is to engage visitors to the farm with plant production activities, like potting and repotting, grafting methods, plant care tips and gardening techniques," he said. Gazebos, restrooms and small cafeteria will be constructed to make them tourist-friendly.

Dr Rajendra K V, director of the department of tourism, said horti-tourism programmes are aimed at educating students and gardening enthusiasts on sustainable and responsible tourism practices.

He told *DH* that city dwellers were increasingly preferring locations that offer experiential tourism over conventional destinations.

The tourism department, in collaboration with horticulture and agriculture departments, will prepare a database of farmers in the region. They will be given basic training on hosting tourists on farms, without disturbing farming activities.

"The training covers aspects of hospitality, with farmers themselves explaining farming techniques to the tourists. We will curate specific farm-tourism features in consultation with horticulture department," he said.

Parashivamurthy said no separate budgetary allocation is needed for the initiative.

"Depending on the viability of our pilot projects at TG Halli and Doddasaggere, we will tailor more such initiatives for farms across the state. Bee-keeping, a prominent practice among farmers of Uttara Kannada, can also be planned," he said.

The horticulture department is eyeing a late 2024 launch for one-day trips from Bengaluru to the farms.

27-08-2024
Dec Hrd Pg 01

ನಭಕ್ಕೆ ಹಾರಲಿವೆ ಧಾರವಾಡದ ನೊಣಗಳು

ಇಸ್ರೋದಿಂದ ಧಾರವಾಡ ಕೃಷಿ ವಿವಿಯ ಸಿದ್ಧಪಡಿಸಿರುವ ನೊಣದ ಕಿಟ್ ಆಯ್ಕೆ

27-08-2024
S-karnataka Pg 01

ಧಾರವಾಡ: 2025ರಲ್ಲಿ ಇಸ್ರೋ ಕೈಗೊಳ್ಳಲಿರುವ ಗಗನಯಾನದಲ್ಲಿ ಧಾರವಾಡದ ವಿಶೇಷ ನೊಣಗಳು ಗಗನಯಾತ್ರಿಗಳಾಗಿ ಪ್ರಯಾಣ ಕೈಗೊಳ್ಳಲಿವೆ. ನೊಣಗಳು ಬಾಹ್ಯಾಕಾಶಕ್ಕೆ ಕರೆದುಕೊಂಡು ಹೋಗುವಷ್ಟು ಮಹತ್ವದ್ದಾ ಎನ್ನುವ ಪ್ರಶ್ನೆ ನಿಮಗೆ ಬರಬಹುದು. ಹಣ್ಣಿನ ನೊಣ (ಫ್ರೂಟ್ಸ್ ಫ್ಲೈಸ್) ಎಂಬ ವಿಶೇಷವಾದ ನೊಣ ಮನುಷ್ಯನ ದೈಹಿಕ ರಚನೆಯ ಶೇ. 70ರಷ್ಟು ಅಂಶವನ್ನು ಒಳಗೊಂಡಿದೆ. 2025ರ ವೇಳೆಗೆ ಇಸ್ರೋ ಮಾನವಸಹಿತ ಗಗನಯಾನ ಕೈಗೊಳ್ಳಲಿದ್ದು, ಅದಕ್ಕಿಂತಲೂ ಮುಂಚೆ ಪರೀಕ್ಷಾರ್ಥವಾಗಿ ಮಾನವರಹಿತ ಯಾನ ನಡೆಯಲಿದೆ. ಆಗ ಈ ಹಣ್ಣಿನ ನೊಣವನ್ನು ಗಗನಯಾನಕ್ಕೆ ಕಳುಹಿಸಲು ತೀರ್ಮಾನಿಸಲಾಗಿದೆ. ವಿಶೇಷವೆಂದರೆ, ಧಾರವಾಡದ ಕೃಷಿ ವಿಶ್ವವಿದ್ಯಾಲಯದ ಜೈವಿಕಶಾಸ್ತ್ರ ವಿಭಾಗದಿಂದ ಅಭಿವೃದ್ಧಿಪಡಿಸಲಾದ ಈ ನೊಣದ ಕಿಟ್ ಇಸ್ರೋ ಕೈಗೊಳ್ಳಲಿರುವ ಗಗನಯಾನಕ್ಕೆ ಆಯ್ಕೆಯಾಗಿದೆ.

> **ಅಮೆರಿಕದ ನಾಸಾದಲ್ಲಿ ನಾನು ಮಾಡಿದ ಸಂಶೋಧನೆಗಳನ್ನು ಇನ್ನಷ್ಟು ಒರೆಗೆ ಹಚ್ಚಿ ಭಾರತ ಗಗನಯಾನಕ್ಕೆ ಪೂರಕ ಮಾದರಿ ಶೋಧಿಸಿದ್ದೇವೆ. ಮುಂದಿನ ದಿನಗಳಲ್ಲಿ ನಮ್ಮ ಸಂಶೋಧನೆಯನ್ನು ಮತ್ತಷ್ಟು ಹೆಚ್ಚಿಸುತ್ತೇವೆ.**
> **ಡಾ.ರವಿಕುಮಾರ ಹೊಸಮನಿ,** ವಿಜ್ಞಾನಿ, ಕೃಷಿ ವಿವಿ

ಏನಿದು ಹಣ್ಣಿನ ನೊಣ?: ಶೂನ್ಯ ಗುರುತ್ವದಲ್ಲಿ ಈ ನೊಣ ಹೋದಾಗ ಅದರ ದೇಹದಲ್ಲಿ ಆಗುವ ಬದಲಾವಣೆಗಳನ್ನು ಅಧ್ಯಯನ ಮಾಡಲಾಗುತ್ತದೆ. ಕೇಂದ್ರ ಸರ್ಕಾರ ಈ ಯೋಜನೆಗೆ 78 ಲಕ್ಷ ರೂ. ನೀಡಿದ್ದು, ಸತತ ಎರಡು ವರ್ಷಗಳ ಕಾಲ ಈ ಹಣ್ಣಿನ ನೊಣಗಳ ಕಿಟ್ ಸಿದ್ಧಪಡಿಸಲಾಗಿದೆ. ಈ ನೊಣ ಸಾಮಾನ್ಯವಾಗಿ ಹಣ್ಣಿನ ಮೇಲೆ ಕುಳಿತುಕೊಳ್ಳುತ್ತದೆ. ಇದು ಮಾನವ ದೈಹಿಕ ರಚನೆ ಹೊಂದಿರುತ್ತದೆ. ಕೇರಳದ ತ್ರಿವೇಂಡ್ರಂ ಹಾಗೂ ಧಾರವಾಡದ ಕೃಷಿ ವಿವಿ ಜೊತೆಗೂಡಿ ಈ ನೊಣಗಳ ಬಗ್ಗೆ ಅಧ್ಯಯನ ನಡೆಸುತ್ತಿವೆ. ಈ ನೊಣಗಳ ಕಿಟ್‌ನಲ್ಲಿ 10 ಗಂಡು ಹಾಗೂ 10 ಹೆಣ್ಣು ನೊಣಗಳು ಇರಲಿದ್ದು, ಗಗನಯಾನದ ಸಂದರ್ಭದಲ್ಲಿ ಆ ನೊಣಗಳ ಸಂತಾನೋತ್ಪತ್ತಿ ಬಗ್ಗೆಯೂ ಅಧ್ಯಯನ ಮಾಡಲಾಗುತ್ತಿದೆ.

ಯಾಕೆ ನೊಣಗಳ ಆಯ್ಕೆ?: ಗಗನಯಾತ್ರಿಗಳು ನಭಕ್ಕೆ ಹಾರಿದಾಗ ಅವರಲ್ಲಿ ಕಿಡ್ನಿ ಸ್ಟೋನ್ ಸಮಸ್ಯೆ ಕಾಡುತ್ತಿದೆ. ಅಲ್ಲದೇ ಗುರುತ್ವ ಇಲ್ಲದ ಕಾರಣ ಮನುಷ್ಯನ ದೇಹದಲ್ಲಿಯ ಮೂಳೆ ಸವೆತಗಳು ಹೆಚ್ಚಿನ ಪ್ರಮಾಣದಲ್ಲಿ ಆಗುತ್ತದೆ. ಹೀಗಾಗಿ ಈ ಹಣ್ಣಿನ ನೊಣವನ್ನು ಮೊದಲಿಗೆ ಕಳುಹಿಸಿ ಅದರಲ್ಲಾಗುವ ಬದಲಾವಣೆಗಳನ್ನು ಇಸ್ರೋ ಪರಿಶೀಲನೆ ನಡೆಸಲಿದೆ. ಇಸ್ರೋ ನಡೆಸಿದ ಮಾದರಿಗಳ ಪರೀಕ್ಷೆಯಲ್ಲಿ 75 ವಿಶ್ವವಿದ್ಯಾಲಯಗಳು ತನ್ನ ಮಾದರಿಯನ್ನು ನೀಡಿದ್ದವು. ಅದರಲ್ಲಿ ಧಾರವಾಡದ ಕೃಷಿ ವಿವಿ ನೀಡಿದ 20 ಹಣ್ಣಿನ ನೊಣಗಳಿರುವ ಕಿಟ್ ಆಯ್ಕೆಯಾಗಿದೆ.

ನಾಸಾ ಜೊತೆಗೂ ಕೃಷಿ ವಿವಿ ಈ ಸಂಬಂಧ ಒಪ್ಪಂದ ಮಾಡಿಕೊಂಡಿದೆ. ಈಗಾಗಲೇ ನೊಣಗಳ ಕಿಟ್ ಸಿದ್ಧಪಡಿಸಲು ವಿಜ್ಞಾನಿಗಳ ತಂಡ ಸಜ್ಜಾಗಿ ಕೆಲಸ ಮಾಡುತ್ತಿದೆ. ಬಾಹ್ಯಾಕಾಶದಲ್ಲಿ ಹೆಚ್ಚು ದಿನ ಇರಲು ಮತ್ತು ಅನ್ಯಗ್ರಹದಲ್ಲಿ ವಾಸದ ಕುರಿತು ನಡೆಯುತ್ತಿರುವ ಅನೇಕ ಸಂಶೋಧನೆಗಳ ಪೈಕಿ ಇದೂ ಒಂದು. ಗಗನಯಾನಿ ನೊಣಗಳು ನೀಡುವ ಮಹತ್ವದ ಮಾಹಿತಿಗಳು ಮನುಕುಲಕ್ಕೆ ಭಾರಿ ಪ್ರಯೋಜನವಾಗುವ ಸಾಧ್ಯತೆ ಇದೆ.

ಸಮಗ್ರ ತಾಂತ್ರಿಕತೆಗೆ ಕೇಂದ್ರ ಸರ್ಕಾರ ಮುಂದಡಿ | ಅದಕ್ಕೂ ಮೊದಲೇ ರಾಜ್ಯದಲ್ಲಿ ವ್ಯವಸ್ಥೆ ಜಾರಿ

ಅಗ್ರಿಸ್ಟಾಕ್-ಡಿಜಿಟಲ್ ಕೃಷಿಗೆ ಕರ್ನಾಟಕ ಮಾದರಿ!

■ ರುದ್ರಣ್ಣ ಹರ್ತಿಕೋಟೆ ಬೆಂಗಳೂರು

ಬಿತ್ತನೆ ಬೀಜ, ರಸಗೊಬ್ಬರಗಳ ವಿವರವನ್ನು ಕಾಲಕಾಲಕ್ಕೆ ನೀಡುವ ಜತೆಯಲ್ಲೇ ಸರ್ಕಾರದ ಪರಿಹಾರ ವಿತರಣೆ ಸೇರಿದಂತೆ ದೇಶದ ರೈತರಿಗೆ ಅಗತ್ಯವಾದ ಸಮಗ್ರ ವಿವರಗಳನ್ನು ಕಾಲಕಾಲಕ್ಕೆ ನೀಡುವ ಉದ್ದೇಶದೊಂದಿಗೆ ಕೇಂದ್ರ ಸರ್ಕಾರ ಜಾರಿಗೆ ಮುಂದಾಗಿರುವ ಅಗ್ರಿಸ್ಟಾಕ್ -ಡಿಜಿಟಲ್ ಕೃಷಿಗೆ ಕರ್ನಾಟಕವೇ ಮಾದರಿ ಆಗಿದೆ. ಕೃಷಿಯನ್ನು ಡಿಜಿಟಲ್ ತಂತ್ರಜ್ಞಾನಕ್ಕೆ ಒಳಪಡಿಸಿ ರೈತರಿಗೆ ಸಿಗುವ ಸರ್ಕಾರದ ಸೇವೆಗಳನ್ನು ವೇಗವಾಗಿ ಸಿಗುವಂತೆ ಮಾಡುವ ಉದ್ದೇಶದ ಈ ಕಾರ್ಯಕ್ರಮ ರೈತರಲ್ಲಿ ಹೊಸ ಆಶಾಭಾವ ಮೂಡಿಸಿದೆ.

ರಾಜ್ಯದಲ್ಲಿ ಭೂಮಿ, ಫ್ರೂಟ್ಸ್, ದಿಶಾ ಹೀಗೆ ವಿವಿಧ ತಂತ್ರಾಂಶ ತರಲಾಗಿದೆ. ಅವುಗಳ ಮುಂದುವರಿದ ಭಾಗವಾಗಿಯೇ ಕೇಂದ್ರ ಸರ್ಕಾರ ಅಗ್ರಿಸ್ಟಾಕ್-ಡಿಜಿಟಲ್ ಕೃಷಿ ತರುತ್ತಿದೆ. ರೈತರಿಗೆ ಅಗತ್ಯವಾದ ಮಾಹಿತಿಗಳೆಲ್ಲವೂ ಬೆರಳ ತುದಿಯಲ್ಲಿ ಲಭ್ಯವಿರುವಂತೆ ನೋಡಿಕೊಳ್ಳುವುದು ಒಟ್ಟಾರೆ ಉದ್ದೇಶ. ರಾಜ್ಯ ಸರ್ಕಾರದೊಂದಿಗೆ ಮಾಡಿಕೊಳ್ಳುವ ಒಪ್ಪಂದದಲ್ಲಿ ಕೆಲವು ಬದಲಾವಣೆಗಳಿಗೂ ಕೇಳಿದೆ. ಇದಕ್ಕೆ ಮುಖ್ಯ ಕಾರ್ಯದರ್ಶಿ ಹಾಗೂ ಮುಖ್ಯಮಂತ್ರಿಗಳು ಒಪ್ಪಿದ್ದಾರೆ.

» ರೈತರಲ್ಲಿ ಹೊಸ ಆಶಾಭಾವ

ಹೊಸ ವ್ಯವಸ್ಥೆಗೆ ಕಾರಣ?: ಅಗ್ರಿಸ್ಟಾಕ್-ಡಿಜಿಟಲ್ ಕೃಷಿಯ ವ್ಯವಸ್ಥೆ ರೈತರ ಡೇಟಾ ಹಾಗೂ ಡಿಜಿಟಲ್ ಸೌಲಭ್ಯ ಒಟ್ಟಾಗಿ ಸೇರಿ ಉತ್ಪಾದಕತೆಯನ್ನು ಹೆಚ್ಚಿಸುತ್ತದೆ ಎಂದೇ ವ್ಯಾಖ್ಯಾನಿಸಲಾಗುತ್ತಿದೆ. ರೈತರಿಗೆ ಅಗ್ಗದ ದರದ ಸಾಲ, ಉನ್ನತ ಗುಣಮಟ್ಟದ ಸೇವೆ ಇದರಿಂದ ಲಭ್ಯವಾಗುತ್ತದೆ ಎಂದೇ ಹೇಳಲಾಗುತ್ತಿದೆ. ಅದಕ್ಕಾಗಿಯೇ ಕೇಂದ್ರ ಸರ್ಕಾರ ಎಲ್ಲ ರಾಜ್ಯಗಳ ಜತೆ ಒಪ್ಪಂದ ಮಾಡಿಕೊಳ್ಳುತ್ತಿದೆ. ರಾಜ್ಯ ಸರ್ಕಾರ ಈಗಾಗಲೇ ರಾಜ್ಯದಲ್ಲಿರುವ ವ್ಯವಸ್ಥೆ ಮುಂದುವರೆಸುವ ಜತೆಗೆ ಹೊಸ ವ್ಯವಸ್ಥೆಯಲ್ಲಿ ಮುಂದುವರೆಯುವ ಆಸಕ್ತಿ ಹೊಂದಿದೆ.

ಯಾವುದೇ ರಾಜ್ಯದಲ್ಲಿ ರೈತರಿಗೆ ಬೇಕಾಗುವ ಬಿತ್ತನೆ ಬೀಜ, ರಸಗೊಬ್ಬರದ ಪ್ರಮಾಣವೆಷ್ಟು? ಯಾವ ರಾಜ್ಯದಲ್ಲಿ ಯಾವ ಬೆಳೆ ಎಷ್ಟು ಉತ್ಪನ್ನ ಬರುತ್ತದೆ, ಬೇರೆ ರಾಜ್ಯದಲ್ಲಿ ಪರ್ಯಾಯ ಬೆಳೆ ಏನು ಬೆಳೆಸಲು ಪ್ರೋತ್ಸಾಹ ನೀಡಬಹುದೆಂಬ ಮಾಹಿತಿ ಲಭ್ಯವಾಗಿ ಕಾರ್ಯಕ್ರಮಗಳನ್ನು ರೂಪಿಸಲು ಅನುಕೂಲವೆಂದು ಹೇಳಲಾಗುತ್ತದೆ. ಎಂಎಸ್‌ಪಿ, ಬೆಳೆ ಹಾನಿ ಪರಿಹಾರಕ್ಕೂ ಈ ವ್ಯವಸ್ಥೆ ಅನುಕೂಲಕರವೆಂದು ಅಧಿಕಾರಿಗಳು ಹೇಳುತ್ತಾರೆ. ರಾಜ್ಯದಲ್ಲಿ 2016-17 ರಲ್ಲಿಯೇ ಫ್ರೂಟ್ಸ್ ತಂತ್ರಾಂಶವನ್ನು ತರಲಾಗಿದೆ. 98 ಲಕ್ಷ ರೈತರು ಅದರಲ್ಲಿ ನೋಂದಣಿಯಾಗಿದ್ದಾರೆ. ಆ ತಂತ್ರಾಂಶದ ಪ್ರಕಾರವೇ ಪರಿಹಾರ ವಿತರಣೆ ನಡೆಯುತ್ತಿದೆ. ಇದೀಗ ಅಗ್ರಿಸ್ಟಾಕ್ ವ್ಯವಸ್ಥೆ ಬರುತ್ತಿರುವುದರಿಂದ ಬಹುತೇಕ ರಾಜ್ಯಗಳ ಕೃಷಿ ಅಧಿಕಾರಿಗಳು ಈ ವ್ಯವಸ್ಥೆ ಅಧ್ಯಯನ ಮಾಡುತ್ತಿದ್ದಾರೆ.

ಬದಲಾವಣೆ ಏಕೆ?: ಕೃಷಿ ರಾಜ್ಯ ಸರ್ಕಾರದ ವಿಷಯ ವಾಗಿರುವುದರಿಂದ ಸಂಪೂರ್ಣ ಕೇಂದ್ರದ ಹಿಡಿತಕ್ಕೆ ಹೋಗಬಾರದೆಂಬ ಉದ್ದೇಶದಿಂದ ಕೆಲವೊಂದು ಬದಲಾವಣೆ ಬೇಕೆಂಬುದು ಸರ್ಕಾರದ ವಾದ. ಕೃಷಿಗೆ ಸಂಬಂಧಿಸಿದ ಸೇವೆಗಳನ್ನು ರಾಜ್ಯದಿಂದಲೇ ಒದಗಿಸಬೇಕು ಎಂಬುದು ಸರ್ಕಾರದ ಉದ್ದೇಶವಾಗಿದೆ. ಕೇಂದ್ರ ಸರ್ಕಾರ ಗ್ರಾಮ ಮಟ್ಟದ ದತ್ತಾಂಶಕ್ಕೆ ಮನವಿ ಮಾಡಿದೆ. ಆದರೆ ರಾಜ್ಯದ ನಿಲುವಿನಲ್ಲಿ ಬದಲಾವಣೆ ಇಲ್ಲವೆಂಬುದನ್ನು ಸ್ಪಷ್ಟಪಡಿಸಲಾಗಿದೆ. ನಮ್ಮ ರಾಜ್ಯದ ರೈತರ ದತ್ತಾಂಶ ಈಗಾಗಲೇ ಜಾರಿಯಲ್ಲಿರುವ ಫ್ರೂಟ್ಸ್‌ನಲ್ಲಿಯೇ ಮುಂದುವರೆಸಬೇಕು ಎಂದು ರಾಜ್ಯ ಪ್ರಬಲವಾಗಿ ವಾದಿಸಿದೆ.



ಅಗ್ರಿಸ್ಟಾಕ್-ಡಿಜಿಟಲ್ ಕೃಷಿ ವ್ಯವಸ್ಥೆಯಿಂದ ಅನುಕೂಲಗಳಾಗುತ್ತದೆ. ಆದರೆ ಒಡಂಬಡಿಕೆಯಲ್ಲಿ ಕೆಲವೊಂದು ಬದಲಾವಣೆ ಕೋರಿದ್ದೇವೆ. ಕೃಷಿ ರಾಜ್ಯದ ವಿಷಯ ಆಗಿರುವುದರಿಂದ ಬದಲಾವಣೆ ಅಗತ್ಯವಾಗಿವೆ. ಸಿಎಂ ಜತೆಗೂ ಚರ್ಚೆ ನಡೆಸಿ ಕೇಂದ್ರದ ಗಮನಕ್ಕೂ ತರಲಾಗಿದೆ.

| ಎನ್. ಚಲುವರಾಯಸ್ವಾಮಿ ಕೃಷಿ ಸಚಿವ

ಅಗ್ರಿ ಸ್ಟಾಕ್ ಉಪಯೋಗಗಳೇನು?

- ಸರ್ಕಾರದ ಪ್ರಯೋಜನ ರೈತರಿಗೆ ಲಭ್ಯ
- ರೈತರನ್ನು ತ್ವರಿತವಾಗಿ ಗುರುತಿಸಿ ದೃಢೀಕರಿಸುವುದು
- ಕೃಷಿ ಸಾಲ, ಹಣದ ಒಳ ಹರಿವು, ಇತರ ಸೇವೆ ಕಡಿಮೆ ವೆಚ್ಚದಲ್ಲಿ ಲಭ್ಯ
- ಕೇಂದ್ರ, ರಾಜ್ಯಗಳ ನಡುವೆ ಸೇತುವೆಯಂತೆ ಕೆಲಸ ಮಾಡುವುದು
- ಉತ್ಪನ್ನಗಳಿಗೆ ನಾವಿನ್ಯತಾ ಮಾರುಕಟ್ಟೆ ಒದಗಿಸುವುದು

ರಾಜ್ಯದ ಕೋರಿಕೆ ಏನು?

- ಒಡಂಬಡಿಕೆ ಸ್ಥಗಿತಕ್ಕೆ ರಾಜ್ಯಗಳಿಗೆ ಅವಕಾಶ
- ಕೇಂದ್ರದ ಜತೆ ಜಿಲ್ಲಾ ಮಟ್ಟದವರೆಗೆ ದತ್ತಾಂಶ ಹಂಚಿಕೆ
- ರಾಜ್ಯಗಳ ಸಮ್ಮತಿ ಪಡೆದು ಕೇಂದ್ರ ಮಾಹಿತಿ ಹಂಚಿಕೊಳ್ಳಬೇಕು
- ರಾಜ್ಯಗಳು ಮಾಹಿತಿ ಹಂಚಿಕೊಳ್ಳುವ ಕುರಿತು ಸ್ವತಂತ್ರ ನೀತಿ ಬೇಕು
- ಮಾಹಿತಿ ವಿನಿಮಯದ ಆದಾಯವನ್ನು ರಾಜ್ಯಗಳೊಂದಿಗೆ ಹಂಚಿಕೊಳ್ಳುವುದು
- ರಾಜ್ಯ ಸರ್ಕಾರದಿಂದಲೇ ವಿಮಾ ಸಂಸ್ಥೆಗಳಿಗೆ ದತ್ತಾಂಶ ಮಾರಾಟಕ್ಕೆ ಅವಕಾಶ
- ರಾಜ್ಯದ ಕೆಎಸ್‌ಎನ್‌ಎಂಡಿಸಿಯನ್ನು ಯಥಾಸ್ಥಿತಿಯಲ್ಲಿ ಮುಂದುವರೆಸುವುದು
- ಕೇಂದ್ರದ ಎನ್‌ಸಿಐಪಿಗಿಂತ ರಾಜ್ಯದ ಸಂರಕ್ಷಣೆ ತಂತ್ರಾಂಶ ಮುಂದುವರಿಸುವುದು

ರೈತರಿಗೆ ಬರಲಿದೆ ಗುರುತಿನ ಸಂಖ್ಯೆ

ಅಗ್ರಿಸ್ಟಾಕ್-ಡಿಜಿಟಲ್ ಕೃಷಿ ಯೋಜನೆ ಜಾರಿ ನಂತರ ಪ್ರತಿಯೊಬ್ಬ ರೈತರಿಗೂ ಪ್ರತ್ಯೇಕ ಗುರುತಿನ ಸಂಖ್ಯೆ ಬರಲಿದೆ. ಕೃಷಿಕರ ರಿಜಿಸ್ಟ್ರಿ ರಚನೆಯಾಗಲಿದೆ. ರೈತರ ಜಮೀನಿನ ವಿವರಗಳನ್ನು ಜೋಡಣೆ ಮಾಡಲಾಗುತ್ತದೆ. ರೈತರ ನಿಖರ ಸಂಖ್ಯೆಯ ಆಧಾರದಲ್ಲಿ ಕಾರ್ಯಕ್ರಮ ಗಳನ್ನು ರೂಪಿಸಲು ಅನುಕೂಲವಾಗಲಿದೆ. ಈಗ ರೈತರ ಸಂಖ್ಯೆಯಲ್ಲಿ ಸ್ಪಷ್ಟತೆ ಇಲ್ಲ. ಆದ್ದರಿಂದಲೇ ಪ್ರತಿಯೊಬ್ಬ ರೈತರಿಗೂ ಪ್ರತ್ಯೇಕ ಸಂಖ್ಯೆ ನೀಡಲಾಗುತ್ತದೆ ಎಂದು ಸರ್ಕಾರದ ಮೂಲಗಳು ಹೇಳಿವೆ. ರೈತರ ರಿಜಿಸ್ಟ್ರಿ ಮಾಡದಿದ್ದಲ್ಲಿ ಪಿಎಂ ಕಿಸಾನ್ ಯೋಜನೆ ಅಂತಹ ರಾಜ್ಯಗಳಿಗೆ ಸ್ಥಗಿತವಾಗಲಿದೆ.

ಕೇಂದ್ರ ಕೇಳಿರುವುದೇನು	ರಾಜ್ಯದಲ್ಲಿ ಇರುವುದೇನು
ರೈತರ ದತ್ತಾಂಶ	ಫ್ರೂಟ್ಸ್ ತಂತ್ರಜ್ಞಾನ
ಜಿಯೋ ರೆಫೆರನ್ಸಡ್ ಗ್ರಾಮಗಳ ನಕ್ಷೆ	ರಾಜ್ಯದಲ್ಲಿ ಈ ವ್ಯವಸ್ಥೆ ಇದೆ
ಡಿಜಿಟಲ್ ಬೆಳೆ ಸಮೀಕ್ಷೆ	ಜಿಎಸ್‌ಐ ಆಧಾರಿತ ಡಿಜಿಟಲ್ ಸರ್ವೇ ವ್ಯವಸ್ಥೆ

ದತ್ತಾಂಶ ಆತಂಕ

ಹವಾಮಾನ ಆಧಾರಿತ ಮಾಹಿತಿಯನ್ನು ಕೇಂದ್ರ ಸರ್ಕಾರ ಏಕೀಕೃತ ಮಾಹಿತಿ ತಂತ್ರಾಂಶ (ವಿಂಡ್ಸ್) ಮೂಲಕ ಅಭಿವೃದ್ಧಿ ಪಡಿಸಲು ಅಟೋಮೆಟಿಕ್ ವೆದರ್ ಸ್ಟೇಷನ್ ಹಾಗೂ ಅಟೋಮೆಟಿಕ್ ರೈನ್ ಗೇಜ್ ದತ್ತಾಂಶ ಪಡೆಯಲು ಉದ್ದೇಶಿಸಿದೆ. ಅದಕ್ಕಾಗಿ ಟೆಂಡರ್ ಕರೆಯುತ್ತಿದೆ. ಇದನ್ನು ಮಾಡುವುದರಿಂದ ಅಧಿಕೃತ ಬಳಕೆದಾರರು ದತ್ತಾಂಶ ಡೌನ್‌ಲೋಡ್ ಮಾಡುವ ಅಪಾಯವಿದೆ ಎಂಬ ಆತಂಕ ಸರ್ಕಾರದ್ದು.

27-08-2024
Vijayavani Pg 05

State's soils are not in great condition, shows data

MANJUNATH HEGDE BOMNALLI
HUBBALLI, DHNS

More than 50% of Karnataka's farmland has low levels of soil organic carbon (SOC), with experts blaming indiscriminate use of chemical fertilisers as one of the main causes of the problem that could lead to a decline in productivity in the long run.

SOC is a key indicator of soil quality and fertility; optimum levels of SOC help in water and nutrient retention, act as a pH level buffer and prevent soil erosion.

But an analysis of soil samples collected by the Agriculture Department between 2017 and 2024 found that SOC was less than 0.5% (the required limit) in 50.41% of agricultural land in the state where tests were conducted, raising concerns about the extent of degradation.

The department analysed over 23 lakh soil samples that were collected in the time period, including around seven lakh samples in the last four years.

Experts say that rampant use of chemical fertilisers and a proportionate decline in organic manure usage are to be blamed for low SOC levels. Monocropping and deforestation have only added to the problem.

According to the Fertiliser Association of India, Karnataka is among the top five states when it comes to use of fertilisers, with the per hectare usage slightly above the national average.

▸ Soil, Page 6

27-08-2024
Dec Hrd Pg 01

State's soils are not in great condition, shows data

Soil, from Page 1

The state's fertiliser consumption for agriculture crops is above 40 lakh metric tonnes per year.

The department's soil tests show that more than 94% of cultivated land in Kolar district , where vegetables are grown widely, has low levels of organic carbon. On the other hand, Dakshina Kannada, Uttara Kannada and Udupi districts, which have more tree cover, are toppers among districts having satisfactory SOC.

Fertiliser consumption, which was 38 lakh MT in 2019-20, crossed 45 lakh MT in 2020-21 and 2021-22. The Agriculture Department has projected a demand of more than 26 lakh MT of fertlisers for the kharif season alone (June to September) in 2024, and total consumption this fiscal year is likely to be more than that of 2023-24, when it stood at 40 lakh MT.

5 dists having max area with low soil organic carbon

Districts	Low SOC area
Kolar	94.67%
Dharwad	88.60%
Gadag	85.99%
Chamarajnagar	79.89%
Koppal	79.42%

(Source: Agriculture Department)

The decline in the use of cattle manure is clearly indicated by the livestock population figures compiled by the Animal Husbandry & Veterinary Services Department. As per the livestock census, the cattle and buffalo population declined from 1.48 crore in 2007 to 1.14 crore in 2019.

Compulsion, cost and convenience are driving a majority of farmers to rely more on fertilisers for plant growth and good yield. In Dharwad district, which is only next to Kolar in terms of low SOC (88.60% of area), farmer Mallesh Kurahatti said he is fully dependent on fertilisers.

"Cattle manure costs Rs 14,000 per acre while the cost of fertilisers required for the same area is Rs 3,000," said Mallesh, who grows green gram and other crops on his 20 acres of land at Kusugal village.

Agricultural scientists advise a blend of organic manure and inorganic fertilisers to maintain a balance between good yield and soil health. Green manure, vermicompost and post-harvest crop residue can also help improve soil health, said soil science and agricultural chemistry expert V B Kuligod.

According to Agriculture Department Director G T Putra, more green manure seeds have been distributed in recent years. "We plan to take five lakh soil samples across the state this year. An app having all the details of soil tests including survey numbers will be launched, so that giving information and guidance to farmers becomes more effective," he said.

ದನಗಳ ಪೋಷಣೆಯಲ್ಲಿ ಎಚ್ಚರ ವಹಿಸಬೇಕಾದ ಅಂಶಗಳು

ಧರಣಿ ಮಂಡಲ

• ಕೆ.ಎನ್. ಶೈಲೇಶ್ ಹೊಳ್ಳ
shyleshholla@gmail.com

ದನಗಳಿಗೆ ಹುಲ್ಲು ಮತ್ತು ಇತರೆ ಆಹಾರವನ್ನು ಸರಿಯಾದ ಸಮಯ ಮತ್ತು ಸರಿಯಾದ ಪ್ರಮಾಣದಲ್ಲಿ ಕೊಡುವುದು ಒಂದು ಕಲೆ ಎಂದೇ ಹೇಳಲಾಗುತ್ತದೆ. ವಿಪರ್ಯಾಸವೆಂದರೆ ನಮ್ಮಲ್ಲಿಯ ಬಹುತೇಕ ಪಶುಪಾಲಕರಿಗೆ ದನಗಳಿಗೆ ಆಹಾರದ ರೂಪದಲ್ಲಿ ಏನನ್ನು ಯಾವಾಗ ಎಷ್ಟು ಪ್ರಮಾಣದಲ್ಲಿ ಕೊಡಬೇಕು ಎನ್ನುವುದರ ಸ್ಪಷ್ಟ ಅರಿವಿಲ್ಲ. ಇದರ ಅರಿವಿಲ್ಲದಿದ್ದರೆ ಹೈನುಗಾರಿಕೆಯಲ್ಲಿ ನಷ್ಟ ಕಟ್ಟಿಟ್ಟ ಬುತ್ತಿ. ಕೆಲವು ಸಂದರ್ಭಗಳಲ್ಲಿ ಪಶುವೈದ್ಯರಿಗೂ ಸಹ ಸರಿಯಾದ ಮಾಹಿತಿ ಇಲ್ಲದಿರುವುದು ದುರಂತವೇ ಸರಿ.

ವೈದ್ಯರಾದ ಎಸ್.ಕೆ. ಪಾಟೀಲ್‌ರವರು ಹೇಳುವಂತೆ ವಾತಾವರಣ ಬದಲಾದ ಹಾಗೆಲ್ಲ ಪ್ರಾಣಿಗಳ ಆರೋಗ್ಯದಲ್ಲಿ ಏರುಪೇರಾಗುವುದು ಸಹಜ. ಹೀಗೆ ಹವಾಮಾನದಲ್ಲಿ ಒಮ್ಮಲೇ ಬದಲಾವಣೆಯಾದಾಗ ರೋಗಾಣುಗಳು ವೃದ್ಧಿಯಾಗಿ ಹಲವು ಕಾಯಿಲೆಗಳು ಹುಟ್ಟಿಕೊಳ್ಳುತ್ತವೆ. ಕಂದು ಮೂತ್ರ ರೋಗ ಮತ್ತು ಥೈಲೀರಿಯಾದಂತಹ ಕಾಯಿಲೆಯೊಂದಿಗೆ ಉಣ್ಣೆಗಳ ಕಾಟವು ಬೇಸಿಗೆಯಲ್ಲೇ ಹೆಚ್ಚಿರುತ್ತದೆ. ಮುಖ್ಯವಾಗಿ ಬೇಸಿಗೆಯಲ್ಲಿ ನೀರು ಹಾಗೂ ಮೇವಿನ ಸಮಸ್ಯೆ ಎದುರಾಗುವ ಸಾಧ್ಯತೆ ಹೆಚ್ಚು. ಟ್ರಿಪನೊಸೋಮಿಯಾಸಿಸ್ ಎಂಬ ಕಾಯಿಲೆ ಪ್ರಾಣಿಗಳ ರಕ್ತ ಹೀರುವ ಕುರುಡು ನೊಣಗಳಿಂದ ಹರಡುತ್ತದೆ. ಬೇಸಿಗೆಯಲ್ಲಿ ಈ ನೊಣಗಳ ಹಾವಳಿ ಹೆಚ್ಚಿರುತ್ತದೆ. ಇದೇ ಸಮಯದಲ್ಲಿ ಮಲೆನಾಡು ಭಾಗದಲ್ಲಿ ಮಂಗನ ಕಾಯಿಲೆಯ ಪ್ರಕರಣಗಳು ಕಾಣಿಸಿಕೊಳ್ಳುತ್ತವೆ. ಹೀಗಾಗಿ ರೈತರು ಪರಾವಲಂಬಿ ಜೀವಿಗಳಾದ ಉಣ್ಣೆ, ಹೇನು, ಜಿಗಟೆಗಳನ್ನು ನಿಯಂತ್ರಿಸಿ ತಮ್ಮ ಜಾನುವಾರುಗಳ ಆರೋಗ್ಯ ಕಾಪಾಡಿಕೊಳ್ಳಬೇಕು. ಉತ್ಕೃಷ್ಟ ಮೇವು ಮತ್ತು ಶುದ್ಧ ನೀರು ಕೊಡುವುದರ ಜೊತೆಗೆ ಸ್ವಚ್ಛತೆ ಕಾಪಾಡಿಕೊಂಡು ದನಗಳ ಪಾಲನೆ ಪೋಷಣೆ ಬಗ್ಗೆ ಕಾಳಜಿ ವಹಿಸಿದರೆ ಬೇಸಿಗೆಯಲ್ಲಿ ಕಾಡುವ ಬಹುತೇಕ ಸಮಸ್ಯೆಗಳಿಂದ ಜಾನುವಾರುಗಳನ್ನು ರಕ್ಷಿಸಬಹುದು. ಹೊರಗಡೆ ಮೇಯಲು ಹೋಗುವ ಜಾನುವಾರುಗಳು ಬಿಸಿಲಿನ ಧಗೆಗೆ ಬಾಯಾರಿ ಎಲ್ಲೆಲ್ಲೋ ನಿಂತಿರುವ ಕೊಳಚೆ ನೀರನ್ನು ಕುಡಿಯುತ್ತವೆ. ಇದರಿಂದ ಅವುಗಳ ರೋಗ ನಿರೋಧಕ ಶಕ್ತಿ ಕುಂದುವುದರ ಜೊತೆಗೆ ಹಲವು ಕಾಯಿಲೆಗಳು ಕೂಡ ಬಂದೆರಗುತ್ತವೆ. ಬಹುತೇಕ ರೋಗಗಳು ಇಂತಹ ಕಲುಷಿತ ನೀರಿನಿಂದಲೇ ಬರುತ್ತವೆ ಎಂಬುದಾಗಿ ತಿಳಿಸಿದ್ದಾರೆ. ಇವರಂತೆ ವೈದ್ಯರು ಮತ್ತು ಪ್ರಾಧ್ಯಾಪಕರಾದ ಡಾ. ಎನ್. ಬಿ. ಶ್ರೀಧರ್‌ರವರು, ತಮಿಳುನಾಡು ರಾಜ್ಯದ ವೆಟರಿನರಿ ಯೂನಿವರ್ಸಿಟಿ ಕುಲಪತಿಗಳಾಗಿದ್ದಾಗ ಡಾ. ವಿ. ಜ್ಞಾನಪ್ರಕಾಶಂರವರು ಈ ಕುರಿತಂತೆ ಬರೆದಿರುವ 'ರೋಮಿಂಗ್ ತ್ರೂ ದಿ ರೂಮೆನ್' ಎಂಬ ಪುಸ್ತಕದ ಉಲ್ಲೇಖವನ್ನು ಮಾಡುತ್ತಾ ದನಗಳ ಪೋಷಣೆಯಲ್ಲಿ ಮಾಡುವ ಕೆಲವು ತಪ್ಪುಗಳ ಬಗ್ಗೆ ಮಾಹಿತಿಯನ್ನು ಪಶುಪಾಲಕರಿಗೆ ವಿವರವಾಗಿ ನೀಡಿದ್ದಾರೆ.

ಇದ್ದಕ್ಕಿದ್ದಂತೆ ದನಗಳಿಗೆ ನೀಡುವ ಆಹಾರ ಅಥವಾ ಹುಲ್ಲನ್ನು ಬದಲಾಯಿಸಬಾರದು. ದನದ ಹೊಟ್ಟೆಯಲ್ಲಿ ಆಹಾರವನ್ನು ಜೀರ್ಣ ಮಾಡಿಕೊಂಡ ಸೂಕ್ಷ್ಮ ಕ್ರಿಮಿಗಳು ಹೊಟ್ಟೆಯಲ್ಲಿರತಕ್ಕಂತಹ ವಾತಾವರಣಕ್ಕೆ ಹೊಂದಿಕೊಂಡು ಆ ಪದಾರ್ಥಗಳನ್ನು ಜೀರ್ಣ ಮಾಡಿಕೊಳ್ಳುತ್ತಿರುತ್ತವೆ. ಇದ್ದಕ್ಕಿದ್ದಂತೆ ಪಶು ಆಹಾರ ಅಥವಾ ಹುಲ್ಲನ್ನು ಒಮ್ಮೆಲೆ ಬದಲಾಯಿಸುವುದರಿಂದ ಕ್ರಿಮಿಗಳು ಅದಕ್ಕೆ ಹೊಂದಿಕೊಳ್ಳಲಾಗುವುದಿಲ್ಲ. ಆಗ ದನದ ಆರೋಗ್ಯ ಕೆಡುವುದಕ್ಕೆ ಅವಕಾಶವಿದ್ದು, ಅವುಗಳು ಹುಲ್ಲನ್ನು ಸರಿಯಾಗಿ ತಿನ್ನುವುದಿಲ್ಲ ಮತ್ತು ನೀರನ್ನು ಸರಿಯಾಗಿ ಕುಡಿಯುವುದಿಲ್ಲ. ಮುಖ್ಯವಾಗಿ ಸರಿಯಾದ ಸಮಯಕ್ಕೆ ಮೆಲುಕು ಸಹ ಹಾಕುವುದಿಲ್ಲ. ಇದರಿಂದ ಸಹಜವಾಗಿ ಹಾಲಿನ ಉತ್ಪತ್ತಿ ಕುಗ್ಗುವುದರೊಂದಿಗೆ ಹಾಲಿನಲ್ಲಿನ ಜಿಡ್ಡಿನಂಶವು ಸಹ ಕಡಿಮೆಯಾಗುತ್ತದೆ.

ಇನ್ನು ತುಂಬಾ ಬಲಿತಿರುವ ಹುಲ್ಲು, ಮಳೆಯಲ್ಲಿ ನೆನೆದಿರತಕ್ಕಂತ ಒಣ ಹುಲ್ಲು, ಫಾಸ್ಫರಸ್ ಖನಿಜ ಕಡಿಮೆ ಇರುವಂತಹ ಜಮೀನಿನಲ್ಲಿ ಬೆಳೆದ ಹುಲ್ಲು, ಯೂರಿಯಾ ಬಳಸಿ ಬೆಳೆದ ಹುಲ್ಲನ್ನು ದನಗಳಿಗೆ ಕೊಡಬಾರದು. ಇದರಲ್ಲಿ ಪ್ರೋಟೀನ್ ಮತ್ತು ಸಕ್ಕರೆ ಅಂಶ ಕಡಿಮೆ ಇರುತ್ತದೆ. ಹಾಗೆಯೇ ದನಕ್ಕೆ ಹೆಚ್ಚು ಪ್ರೋಟೀನ್ ಮತ್ತು ಹೆಚ್ಚು ಸಕ್ಕರೆ ಅಂಶವಿರುವ ಆಹಾರವನ್ನು ಸಹ ಕೊಡಬಾರದು. ದನಗಳಿಗೆ ಕಡಲೇಕಾಯಿ ಹಿಂಡಿ ಅಥವಾ ಹತ್ತಿ ಬೀಜದ ಹಿಂಡಿ ಹಾಗೂ ಬೆಲ್ಲವನ್ನು ಹೆಚ್ಚಿಗೆ ತಿನ್ನಿಸಬಾರದು. ಬೇಗ ಜೀರ್ಣವಾಗುವ ಪಿಷ್ಟ ಪದಾರ್ಥ ಹಾಗೂ ಕಡಿಮೆ ಪ್ರೋಟೀನ್‌ಗಳನ್ನು ನೀಡಬಾರದು. ಇದರಿಂದ ಹೊಟ್ಟೆಯಲ್ಲಿ ಹುಳಿ ಉತ್ಪತ್ತಿಯಾಗುತ್ತದೆ. ಯಾವುದಾದರೂ ಶುಭ ಅಶುಭ ಕಾರ್ಯಗಳಲ್ಲಿ ಉಳಿದಂತಹ ಅನ್ನದ ಗಂಜಿ ಕುಡಿಸುವುದರಿಂದ, ಸಿಹಿ ಪದಾರ್ಥ ಅಥವಾ ಹಳಸಿದ ಅನ್ನವನ್ನು ತಿನ್ನಿಸುವುದರಿಂದ ದನಗಳು ಸತ್ತಿರತಕ್ಕಂತಹ ನಿದರ್ಶನಗಳು ರೈತರಲ್ಲಿ ಹೇರಳವಾಗಿವೆ. ಹಾಲು ಜಾಸ್ತಿ ಬರಲಿ ಎಂದು ದನಗಳಿಗೆ ಕಾಳುಗಳ ನುಚ್ಚು ಅಥವಾ ಕಾಳುಗಳ ಹಿಟ್ಟು, ಗೋಧಿ ಬೂಸಾ, ಅಕ್ಕಿ ತೌಡನ್ನು ಹೆಚ್ಚಾಗಿ ಕೊಡುವುದು ಅಪಾಯಕಾರಿ. ಕಾಳುಗಳ ನುಚ್ಚು ಅಥವಾ ಕಾಳುಗಳ ಹಿಟ್ಟನ್ನು ಗೊತ್ತಿಲ್ಲದೆ ಅಜ್ಞಾನದಿಂದ ಹೆಚ್ಚಾಗಿ ತಿನ್ನಿಸುವುದರಿಂದ ದನಗಳು ಸಾಯುವ ಸಾಧ್ಯತೆ ಹೆಚ್ಚಿರುತ್ತವೆ. ಕಾಳುಗಳ ನುಚ್ಚು ತುಂಬಾ ಸಣ್ಣಗೆ ಇರಬಾರದು. ಹಾಗೆಯೇ ಸಾಕಷ್ಟು ನಾರಿನಂಶ ಕೊಡದೇ ಪಿಷ್ಟ ಪದಾರ್ಥಗಳನ್ನು ನೀಡುವುದು ಅಪಾಯಕಾರಿ. ಕೆಲವೆಡೆ ಬಾರ್ಲಿ, ಓಟ್ಸ್, ಮರಗೆಣಸು ಪುಡಿಗಳನ್ನು ಬೀರು, ಬ್ರಾಂದಿ ತಯಾರು ಮಾಡುವುದಕ್ಕೆ ಬಳಸಿದ ನಂತರ ದನಗಳಿಗೆ ಕೊಡುತ್ತಾರೆ. ಆಗತಾನೇ ಬಟ್ಟಿ ಇಳಿಸಿದನ್ನು ಒಂದು ದಿನದ ಒಳಗಾಗಿ ತಿನ್ನಿಸುವುದರಿಂದ ತೊಂದರೆಯಾಗುವುದಿಲ್ಲ. ಅದನ್ನು ದಾಸ್ತಾನು ಮಾಡಿ ಬಳಸುವುದರಿಂದ ಅದು ಹುಳಿಯಾಗುತ್ತದೆ ಮತ್ತು ಅದರಲ್ಲಿ ಬೂಷ್ಟು ಬೆಳೆಯುವುದಕ್ಕೆ ಅವಕಾಶವಿರುತ್ತದೆ.

ಬೇಡದ ಆಹಾರವನ್ನು ದನಗಳಿಗೆ ನೀಡಿದಾಗ ಅವುಗಳ ಸಗಣಿ ಕೆಟ್ಟ ವಾಸನೆಯಿಂದ ಕೂಡಿರುತ್ತದೆ. ಕೆಲವು ಸಂದರ್ಭಗಳಲ್ಲಿ ಸಗಣಿ ತುಂಬಾ ನೀರಾಗಿ ಭೇದಿ ರೂಪದಲ್ಲಿದ್ದು, ಅದರಲ್ಲಿ ಸಣ್ಣ ನೊರೆಗಳು ಕಂಡುಬರುತ್ತವೆ. ಇಂತಹ ದನಗಳು ಬೇಗ ಗರ್ಭ ಕಟ್ಟುವುದಿಲ್ಲ. ಇದರಿಂದ ಮೆಲುಕು ಹಾಕುವಾಗ ಹುಳಿ ವಾಸನೆ ಬರುವುದರೊಂದಿಗೆ ಮೊದಲನೆ ಹೊಟ್ಟೆಯಾದ ರೂಮೆನ್ ಹುಣ್ಣಾಗುವುದಕ್ಕೆ ಅವಕಾಶಗಳು ಹೆಚ್ಚಿರುತ್ತವೆ. ಇದರ ಪರಿಣಾಮ ದನ ಕುಂಟುತ್ತಾ ನಡೆಯುವುದರೊಂದಿಗೆ ದಿನದಿಂದ ದಿನಕ್ಕೆ ಸೊರಗುತ್ತಾ ಹೋಗುತ್ತದೆ. ಇನ್ನು ದನ ತಿನ್ನುವ ಹುಲ್ಲಿನಲ್ಲಿ ನಾರಿನ ಅಂಶ ಕಡಿಮೆ ಇರಬಾರದು. ಎಳೇ ಹುಲ್ಲುಗಳನ್ನು ತಿನ್ನಿಸುವುದರಿಂದ ಹೊಟ್ಟೆ ಸರಿಯಾಗಿ ಕದಲದೆ ಸಮಯಕ್ಕೆ ಸರಿಯಾಗಿ ಮೆಲುಕು ಹಾಕಲಾಗುವುದಿಲ್ಲ. ಇದರಿಂದ ಹೊಟ್ಟೆ ಊದಿಕೊಳ್ಳುವುದಕ್ಕೆ ಅವಕಾಶವಿದ್ದು ಮೂರನೇ ಹೊಟ್ಟೆ ಬಿಗಿಯಾಗುತ್ತಾ ಹೋಗುತ್ತದೆ. ಆಗ ದನಗಳು ಹುಲ್ಲು ತಿನ್ನುವುದಿಲ್ಲ ಮತ್ತು ನೀರು ಕುಡಿಯುವುದಿಲ್ಲ. ಇದರೊಂದಿಗೆ ಹಾಲಿನ ಇಳುವರಿಯು ಕುಗ್ಗುತ್ತದೆ. ಇದರ ಲಕ್ಷಣವೆಂದರೆ ದನಗಳು ಸಿಕ್ಕ ಸಿಕ್ಕ ಕಟ್ಟಿಗೆಗಳನ್ನು ಕಚ್ಚತೊಡಗುವುದೇ ಆಗಿದೆ. ಹೀಗಾಗಿ ನುಣ್ಣಗೆ ಇರುವ ಆಹಾರವನ್ನು ದನಗಳಿಗೆ ಕೊಡಲೇ ಬಾರದು. ಎಳೇ ಹುಲ್ಲುಗಳಲ್ಲಿ ಸಾಕಷ್ಟು ನಾರಿನ ಅಂಶ ಇರುವುದಿಲ್ಲ. ತುಂಬಾ ಬಲಿತ ಹುಲ್ಲುಗಳಲ್ಲಿ ಹೆಚ್ಚು ಲಿಗ್ನಿನ್ ಅಂಶ ಇರುತ್ತದೆ. ಇದನ್ನು ದನಗಳು ಜೀರ್ಣಿಸಿಕೊಳ್ಳುವುದಿಲ್ಲ. ಈ ಕಾರಣಗಳಿಂದ ಹುಲ್ಲುಗಳನ್ನು ಸರಿಯಾದ ಹಂತದಲ್ಲಿ ಕಟಾವು ಮಾಡಿ ಕೊಡಬೇಕು. ಹುಲ್ಲನ್ನು ತುಂಬಾ ಸಣ್ಣದಾಗಿ ತುಂಡುಮಾಡಿ ತಿನ್ನಿಸುವುದರಿಂದಲೂ ದನಗಳು ಸಾಯುವ ಸಾಧ್ಯತೆ ಹೆಚ್ಚಿರುತ್ತದೆ. ಹೆಚ್ಚು ಸಸಾರಜನಕ ಇರುವ ದ್ವಿದಳ ಧಾನ್ಯಗಳ ಹುಲ್ಲನ್ನು ತಿನ್ನಿಸಬಾರದು. ದನಗಳು ಹೊಲದಲ್ಲಿ ಚೆನ್ನಾಗಿ ಬೆಳೆದಿರುವ ಅಲಸಂದಿ, ಹೆಸರು, ಅವರೆ ಮೊದಲಾದ ಹುಲ್ಲುಗಳನ್ನು ಬೇಗ ಬೇಗ ತಿನ್ನುವುದರಿಂದ ಅದು ಹೊಟ್ಟೆಯಲ್ಲಿ ಕೆಲವು ಕ್ರಿಮಿಗಳು ಜೀರ್ಣಮಾಡಿಕೊಳ್ಳುವ ಬದಲಾಗಿ ಕೊಳೆಯುವಂತೆ ಮಾಡುತ್ತವೆ. ಆಗ ಸಣ್ಣ ನೊರೆ ಉತ್ಪತ್ತಿಯಾಗಿ ಹುಲ್ಲುಗಳ ಮಧ್ಯೆ ಸೇರಿಕೊಂಡು ಹೊಟ್ಟೆ ಊತ ಆಗುವಂತೆ ಮಾಡುತ್ತದೆ.

ಮುಖ್ಯವಾಗಿ ದನಗಳಿಗೆ ಕಲುಷಿತ ಆಹಾರ ಮತ್ತು ಕಲುಷಿತ ನೀರನ್ನು ಕುಡಿಸಬಾರದು. ಕೊಳೆತಿರುವ ಪಶು ಆಹಾರ, ಕಾಳುಗಳು, ಹೋಟೆಲ್‌ಗಳಲ್ಲಿ ತಿಂದುಬಿಟ್ಟಿರುವ ಆಹಾರ ಪದಾರ್ಥ, ಹಳಸಿದ ಆಹಾರ, ಕೆಟ್ಟಿರುವ ಸೈಲೇಜ್, ಬೂಸ್ಟ್ ಹಿಡಿದಿರುವಂತ ಪಶು ಆಹಾರವನ್ನು ಕೊಡಬಾರದು. ನೆನೆದ ಹುಲ್ಲಿನಲ್ಲಿ ಬೂಸ್ಟ್ ಇದ್ದು ಇದನ್ನು ತಿನ್ನಿಸುವುದರಿಂದ ತೊಂದರೆ ಆಗುವ ಸಾಧ್ಯತೆ ಹೆಚ್ಚಿರುತ್ತದೆ. ಹಾಗೆಯೇ ಕಾಳುಗಳ ಹುಲ್ಲನ್ನು ಸರಿಯಾಗಿ ಒಣಗಿಸದೇ ಅಥವಾ ಒಣಗಿಸಿದಾಗ ಮಳೆಗೆ ನೆನೆದಿದ್ದರೆ, ಇಂತಹ ಹುಲ್ಲನ್ನು ತೇವ ಆರುವ ಮುನ್ನವೇ ದಾಸ್ತಾನು ಮಾಡಿದಲ್ಲಿ ಅಂತಹ ಹುಲ್ಲನ್ನು ತಿನ್ನಿಸುವುದರಿಂದ ಅದರಲ್ಲಿ ಬೆಳೆದಿರತಕ್ಕಂತಹ ಬೂಸ್ಟ್‌ನ ಕ್ರಿಮಿಗಳು ಉತ್ಪತ್ತಿಮಾಡುವ ವಿಷದಿಂದ ದನಗಳ ಲಿವರ್ ಸರಿಯಾಗಿ ಕೆಲಸ ಮಾಡುವುದಿಲ್ಲ. ಇನ್ನು ದನಗಳನ್ನು ಹೆಚ್ಚಾಗಿ ಉಪವಾಸವಿಡಬಾರದು. 6 ರಿಂದ 8 ದಿನ ಇವುಗಳು ಸರಿಯಾಗಿ ಸಮಯಕ್ಕೆ ಹುಲ್ಲು ತಿನ್ನಲಿಲ್ಲ ಮತ್ತು ನೀರು ಕುಡಿಯಲಿಲ್ಲವೆಂದರೆ ಹೊಟ್ಟೆಯಲ್ಲಿರುವ ಕ್ರಿಮಿಗಳು ಸಾಯತೊಡಗುತ್ತವೆ. ಹೀಗಾಗಿ ದನಗಳಿಗೆ ಸುಲಭವಾಗಿ ಜೀರ್ಣ ವಾಗುವ ಪಶು ಆಹಾರವನ್ನು ಸಮಯಕ್ಕೆ ಸರಿಯಾಗಿ ನೀಡುತ್ತಿರಬೇಕು. ಇದರೊಂದಿಗೆ ಅಮೈನೋ ಆಮ್ಲಗಳು, ವಿಟಮಿನ್‌ಗಳು ಮತ್ತು ಒಳ್ಳೆ ಖನಿಜ ಮಿಶ್ರಣವನ್ನು ಕೊಡುತ್ತಿರಬೇಕು. ಉತ್ಕೃಷ್ಟವಾದ ಹುಲ್ಲನ್ನು ನೀಡುತ್ತಿರಬೇಕು.

27-08-2024
Hosadiganta Pg 06

27-08-2024
V-karnataka Pg 09

ಅಕ್ಷರ ಚಪ್ಪರ ಕನ್ನಡ ಸಾಹಿತ್ಯ ಮತ್ತು ಸಾಂಸ್ಕೃತಿಕ ಸಂಸ್ಥೆಯಿಂದ ಪ್ರಯೋಗ | ಪುಸ್ತಕ ಓದುವ ಸಂಸ್ಕೃತಿ ವೃದ್ಧಿಸಲು ಕ್ರಮ

ಅಂಚೆ ಮೂಲಕ ಹೊತ್ತಗೆಯೇ ಬರಲಿದೆ ನಿಮ್ಮ ಮನೆಗೆ

■ ವಿಕ ಸುದ್ದಿಲೋಕ ಬೆಂಗಳೂರು



ಪುಸ್ತಕ ಖರೀದಿಸಿ ಓದಲು ಸಾಧ್ಯವಾಗದವರು, ಗ್ರಂಥಾಲಯಗಳಿಗೆ ತೆರಳಲಾಗದವರು ಚಿಂತಿಸಬೇಕಿಲ್ಲ. ನಿಮಗಾಗಿಯೇ, 'ಹೊತ್ತಗೆ ನಿಮ್ಮ ಮನೆಗೆ' ಅಂಚೆ ಗ್ರಂಥಾಲಯ ಕಾರ್ಯಕ್ರಮವನ್ನು 'ಅಕ್ಷರ ಚಪ್ಪರ ಕನ್ನಡ ಸಾಹಿತ್ಯ ಮತ್ತು ಸಾಂಸ್ಕೃತಿಕ ಸಂಸ್ಥೆ'ಯು ನಗರದಲ್ಲಿ ಆರಂಭಿಸಿದೆ.

ನಾನಾ ಸಂಸ್ಥೆಗಳಲ್ಲಿ ದುಡಿಯುತ್ತ ಕನ್ನಡ ಭಾಷೆ ಮತ್ತು ಸಾಹಿತ್ಯ ವೃದ್ಧಿ ಕಾಯಕ ಮಾಡಲು 13ಮಂದಿ ಸಮಾನ ಮನಸ್ಕರು ಸೇರಿ 2021ರಲ್ಲಿ ಈ ಸಂಸ್ಥೆ ಸ್ಥಾಪಿಸಿದ್ದಾರೆ. ಕನ್ನಡ ಪುಸ್ತಕಗಳನ್ನು ಓದುವ ಸಂಸ್ಕೃತಿಯನ್ನು ಜನರಲ್ಲಿ ವೃದ್ಧಿಸುವ ನಿಟ್ಟಿನಲ್ಲಿ ಆ.2ರಂದು 'ಹೊತ್ತಗೆ ನಿಮ್ಮ ಮನೆಗೆ' ಅಂಚೆ ಗ್ರಂಥಾಲಯ ಕಾರ್ಯಕ್ರಮ ಪ್ರಾರಂಭಿಸಿದ್ದಾರೆ.

ಈ ಹಿಂದೆ ಸಂಸ್ಥೆಯು ನಗರದ 30ಕ್ಕೂ ಹೆಚ್ಚು ಆಟೋ ಮತ್ತು ಟ್ಯಾಕ್ಸಿಗಳಲ್ಲಿ ಪುಸ್ತಕಗಳನ್ನಿಟ್ಟು, ಪ್ರಯಾಣಿಕರನ್ನು ಓದಲು ಪ್ರೇರೇಪಿಸುತ್ತಿತ್ತು. ಇದಕ್ಕಾಗಿಯೇ 'ಕನ್ನಡ ಪುಸ್ತಕಗಳು ಗಾಲಿಗಳ ಮೇಲೆ' ಎಂಬ ಅಭಿಯಾನ ಆರಂಭಿಸಲಾಗಿತ್ತು. ಇದರ ಮುಂದುವರಿದ ಭಾಗವಾಗಿ 'ಹೊತ್ತಗೆ ನಿಮ್ಮ ಮನೆಗೆ' ಅಂಚೆ ಗ್ರಂಥಾಲಯ ಎಂಬ ಹೊಸದೊಂದು ಪ್ರಯತ್ನ ಆರಂಭಿಸಿದೆ. ನೋಂದಣಿಯಾದವರ ಮನೆಗೆ ಅವರು ಇಚ್ಛಿಸುವ ಪುಸ್ತಕಗಳನ್ನು ಅಂಚೆ ಮೂಲಕ ತಲುಪಿಸಲಾಗುತ್ತದೆ.

ಹಲವರು ಇನ್ನೂ ಕುವೆಂಪು, ದ.ರಾ.ಬೇಂದ್ರೆ, ಪೂರ್ಣಚಂದ್ರ ತೇಜಸ್ವಿ, ಎಸ್.ಎಲ್.ಭೈರಪ್ಪರಂತಹ ಪ್ರಮುಖ ಲೇಖಕರ ಪುಸ್ತಕಗಳ ಓದಿಗೆ ಸೀಮಿತವಾಗಿದ್ದಾರೆ. ಆದರೆ, ಪ್ರತಿ ವರ್ಷ ಸುಮಾರು 3 ಸಾವಿರಕ್ಕೂ ಹೆಚ್ಚು ಪುಸ್ತಕಗಳು ಪ್ರಕಟಗೊಳ್ಳುತ್ತಿವೆ. ಇದರಲ್ಲಿ ಅನೇಕ ಯುವ ಸಾಹಿತಿಗಳು ಮತ್ತು ಹೊಸಬರ ಪುಸ್ತಕಗಳಿವೆ. ಆದರೆ, ಹೊಸ ಲೇಖಕರ ಪುಸ್ತಕಗಳನ್ನು ಕೊಂಡು ಓದುವವರ ಸಂಖ್ಯೆ ಕಡಿಮೆ ಇದೆ. ಹೀಗಾಗಿ, ಯುವ ಸಾಹಿತಿಗಳು, ಕಥೆಗಾರರನ್ನು ಪ್ರೋತ್ಸಾಹಿಸಲು 'ಹೊತ್ತಿಗೆ ನಿಮ್ಮ ಮನೆಗೆ' ಕಾರ್ಯಕ್ರಮ ಆರಂಭಿಸಿದ್ದೇವೆ. ಆಸಕ್ತರು ಪುಸ್ತಕವನ್ನು ತಮ್ಮ ಮನೆಗೆ ತರಿಸಿಕೊಂಡು ಓದಬಹುದು. ಆ ಪುಸ್ತಕ ಇಷ್ಟವಾದರೆ ಖರೀದಿಸಬಹುದು ಎಂದು ಅಕ್ಷರ ಚಪ್ಪರ ಕನ್ನಡ ಸಾಹಿತ್ಯ ಮತ್ತು ಸಾಂಸ್ಕೃತಿಕ ಸಂಸ್ಥೆಯ ಸದಸ್ಯರೊಬ್ಬರು ತಿಳಿಸಿದರು.

ನೋಂದಣಿ ಹೇಗೆ?

ಪುಸ್ತಕಗಳನ್ನು ಹಾಳು ಮಾಡಬಾರದು, ಹಾಳೆಗಳನ್ನು ಕೀಳಬಾರದು ಎಂಬ ಉದ್ದೇಶದಿಂದಾಗಿ ಓದುಗರು 1,000 ರೂ.ಗಳನ್ನು ಕೊಟ್ಟು ಚಂದಾದಾರರಾದರೆ 3 ವರ್ಷಗಳವರೆಗೆ ಎಷ್ಟು ಪುಸ್ತಕಗಳನ್ನು ಬೇಕಾದರೂ ಉಚಿತವಾಗಿ ತರಿಸಿಕೊಂಡು ಓದಬಹುದಾಗಿದೆ. ಆದರೆ, ಮನೆಗೆ ತರಿಸಿಕೊಂಡ ಪುಸ್ತಕವನ್ನು 15 ದಿನಗಳೊಳಗಾಗಿ ಹಿಂದಿರುಗಿಸಬೇಕು. ಪುಸ್ತಕ ಓದಿ ವಾಪಸ್ ಕೊಡುವಾಗ ಆ ಕೃತಿ ಬಗ್ಗೆ ಟಿಪ್ಪಣಿ ಅಥವಾ ವಿಮರ್ಶೆ ಬರೆದು ಕಳುಹಿಸಿದರೆ 'ಉತ್ತಮ ಓದುಗ' ಅಥವಾ 'ತಿಂಗಳ ಓದುಗ' ಎಂಬ ಪ್ರಶಸ್ತಿ ಕೊಡಲಾಗುತ್ತದೆ ಎಂದು ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷೆ ಮಧುಶ್ರೀ ತಿಳಿಸಿದ್ದಾರೆ.

1000 ಪುಸ್ತಕಗಳ ಭಂಡಾರ

''ಸದ್ಯ ಸಂಸ್ಥೆಯಲ್ಲಿ ಸ್ಪರ್ಧಾತ್ಮಕ ಪರೀಕ್ಷೆಯ ಪುಸ್ತಕಗಳು ಸೇರಿದಂತೆ ಕಥೆ, ಕಾದಂಬರಿ, ಕವನ ಸೇರಿದಂತೆ ನಾನಾ ಸಾಹಿತ್ಯ ಪ್ರಕಾರಗಳ 1000 ಪುಸ್ತಕಗಳ ಸಂಗ್ರಹವಿದೆ. ಈ ಕಾರ್ಯಕ್ರಮ ಆರಂಭವಾದ 25 ದಿನಗಳಲ್ಲಿಯೇ 15ಕ್ಕೂ ಹೆಚ್ಚು ಜನರು ನೋಂದಣಿಯಾಗಿದ್ದಾರೆ. ಹಲವರು ಸಂಸ್ಥೆಯ ಬಳಿ ಲಭ್ಯವಿರುವ ಪುಸ್ತಕಗಳ ಪಟ್ಟಿಯನ್ನು ಕಳುಹಿಸಿಕೊಂಡುವಂತೆ ಕೇಳಿದ್ದಾರೆ. ಓದುಗರನ್ನು ಪ್ರೋತ್ಸಾಹಿಸಲು ಪ್ರಶಸ್ತಿ ಕೂಡ ನೀಡಲಾಗುವುದು,'' ಎನ್ನುತ್ತಾರೆ ಸಂಸ್ಥೆಯ ಮಧುಶ್ರೀ.